## ಕರ್ನಾಟಕ ವಿಧಾನ ಪರಿಷತ್ತು

## ನಿಯಮ-72

ವಿಷಯ:- ಶ್ರೀ ಮರಿತಿಬ್ಬೇಗೌಡ, ವಿಧಾನ ಪರಿಷತ್ತಿನ ಸದಸ್ಯರು ಇವರು ನಿಯಮ 72ರಡಿ ಸಲ್ಲಿಸಿರುವ ನಿಯಮದ ಮೇರೆಗೆ ಸೂಚನೆ.

**ಪ್ರಸ್ತಾಪ:-** ಕೋವಿಡ್-19ರ ಅವಧಿಯ ದಿನಾಂಕ: 02-05-2021ರಂದು ಚಾಮರಾಜನಗರ ಜಿಲ್ಲಾ ಆಸ್ಪತ್ರೆಯಲ್ಲಿ ಸಕಾಲದಲ್ಲಿ ರೋಗಿಗಳಿಗೆ ಆಕ್ಸಿಜನ್ ಪೂರೈಸದ ಕಾರಣದಿಂದ ಸುಮಾರು 24 ಮಂದಿ ಮೃತಪಟ್ಟಿದ್ದು, ಈ ಸಂಬಂಧ ರಚಿಸಲಾದ ರಾಜ್ಯ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರಾದ ಶ್ರೀ ಬಿ.ಎ. ಪಾಟೀಲರ ಒನ್ ಮ್ಯಾನ್ ಕಮೀಷನ್ ವರದಿಯಲ್ಲಿ, ವಿಪತ್ತು ನಿರ್ವಹಣಾ ಸಮಿತಿಯ ಮುಖ್ಯಸ್ಥರಾದ ಮೈಸೂರು ಹಾಗೂ ಚಾಮರಾಜನಗರ ಜಿಲ್ಲೆಗಳ ಅಂದಿನ ಇಬ್ಬರು ಜಿಲ್ಲಾಧಿಕಾರಿಗಳನ್ನು ಹಾಗೂ ಚಾಮರಾಜನಗರ ವೈದ್ಯಕೀಯ ವಿಜ್ಞಾನ ಸಂಸ್ಥೆಗಳ ಮುಖ್ಯ ಆಡಳಿತಾಧಿಕಾರಿಯನ್ನು (ಸಿ.ಎ.ಒ) ವರದಿಯಲ್ಲಿ ಕೈಬಿಟ್ಟಿರುವುದರಿಂದ, ವರದಿಯ ನೈಜತೆ ಬಗ್ಗೆ ಸಂಶಯ ಉಂಟಾಗಿರುತ್ತದೆ. ಅಲ್ಲದೆ ಮೃತರ ಅವಲಂಬಿತ ಕುಟುಂಬಸ್ಥರಿಗೆ ಸೂಕ್ತ ಪರಿಹಾರ ನೀಡದೇ ಇರುವುದರಿಂದ, ಉಂಟಾದ ಗಂಭೀರ ಸಮಸ್ಯೆ ಕುರಿತು ಮಾನ್ಯ ವೈದ್ಯಕೀಯ ಶಿಕ್ಷಣ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಲ್ಲಿ ಪ್ರಸ್ತಾಪ ಬಯಸುತ್ತೇನೆ.

****

**ಹೇಳಿಕೆ:-**

ಚಾಮರಾಜನಗರ ಜಿಲ್ಲಾಸ್ಪತ್ರೆ, ಚಾಮರಾಜನಗರ ಇಲ್ಲಿ ದಿನಾಂಕ: 03/05/2021ರಂದು ಕೋವಿಡ್-19 ರೋಗಿಗಳು ಮರಣ ಹೊಂದಿದ ಘಟನೆಗೆ ಸಂಬಂಧಿಸಿದಂತೆ, ಶ್ರೀ ಬಿ.ಎ. ಪಾಟೀಲ್, ನಿವೃತ್ತ ನ್ಯಾಯಾಧೀಶರು, ಕರ್ನಾಟಕ ಉಚ್ಚ ನ್ಯಾಯಾಲಯ ಇವರು ಸಲ್ಲಿಸಿರುವ ತನಿಖಾ ವರದಿಯಲ್ಲಿ, ತನಿಖೆಯಲ್ಲಿ ಸಂಬಂಧಪಟ್ಟ ರೋಗಿಗಳ ಸಂಬಂಧಿಕರು ಮತ್ತು ಘಟನೆ ನಡೆದ ಅವಧಿಯಲ್ಲಿ ಕರ್ತವ್ಯ ನಿರ್ವಹಿಸಿರುವ ಎಲ್ಲಾ ಅಧಿಕಾರಿ/ ಸಿಬ್ಬಂದಿಗಳನ್ನು ಸುದೀರ್ಘವಾಗಿ ವಿಚಾರಣೆಗೆ ಒಳಪಡಿಸಲಾಗಿದೆ. ಪ್ರತಿಯೊಬ್ಬರ ಹೇಳಿಕೆಯನ್ನು ತನಿಖಾಧಿಕಾರಿಗಳು ಪ್ರತ್ಯೇಕವಾಗಿ ವಿಶ್ಲೇಷಿಸಿ, ಹಿಂದಿನ ಜಿಲ್ಲಾಧಿಕಾರಿ, ಮೈಸೂರು, ಹಿಂದಿನ ಜಿಲ್ಲಾಧಿಕಾರಿ, ಚಾಮರಾಜನಗರ ಜಿಲ್ಲೆ ಹಾಗೂ ಮುಖ್ಯ ಆಡಳಿತಾಧಿಕಾರಿ, ಚಾಮರಾಜನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಇವರುಗಳು ಈ ಘಟನೆಗೆ ಸಂಬಂಧಿಸಿದಂತೆ ಕರ್ತವ್ಯ ನಿರ್ಲಕ್ಷ್ಯತೆ ವಹಿಸಿರುವುದಿಲ್ಲವೆಂಬ ಕುರಿತು ಸಕಾರಣಗಳೊಂದಿಗೆ ವರದಿ ಸಲ್ಲಿಸಿರುತ್ತಾರೆ. ವರದಿಯಲ್ಲಿ, ಕರ್ತವ್ಯ ನಿರ್ಲಕ್ಷ್ಯತೆ ವಹಿಸಿರುತ್ತಾರೆಂದು ಆರೋಪಿಸಿರುವ ಅಧಿಕಾರಿಗಳ ವಿರುದ್ಧ ಶಿಸ್ತುಕ್ರಮಕ್ಕೆ ಪರಿಶೀಲನೆಯಲ್ಲಿರುತ್ತದೆ.

ಚಾಮರಾಜನಗರ ಜಿಲ್ಲಾ ಆಸ್ಪತ್ರೆಯಲ್ಲಿ ಸಂಭವಿಸಿದ ಘಟನೆಯಿಂದಾಗಿ ದಿನಾಂಕ: 02.05.2021 ಮತ್ತು 03.05.2021ರಂರು ಮೃತಪಟ್ಟ ಕೋವಿಡ್-19 ವೈರಾಣು ಸೋಂಕಿತ 24 ವ್ಯಕ್ತಿಗಳ ಕಾನೂನುಬದ್ಧ ವಾರಸುದಾರರಿಗೆ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ರಿಟ್ ಅರ್ಜಿ ಸಂಖ್ಯೆ: 6435/2020 ಮತ್ತು ಅದಕ್ಕೆ ಹೊಂದಿಕೊಂಡಂತೆ ಇತರೆ ಅರ್ಜಿಗಳ ವಿಷಯವನ್ನು ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ: 20.05.2021ರಂದು ವಿಚಾರಣೆಗೆ ಕೈಗೆತ್ತಿಕೊಂಡು ನೀಡಿದ್ದ ನಿರ್ದೇಶನದಂತೆ ತಲಾ ರೂ.2.00 ಲಕ್ಷ (ಎರಡು ಲಕ್ಷ ರೂಪಾಯಿಗಳು ಮಾತ್ರ) ದಿನಾಂಕ: 21.05.2021ರಲ್ಲಿ ಜಿಲ್ಲಾಧಿಕಾರಿ, ಚಾಮರಾಜನಗರ ಜಿಲ್ಲೆ ಇವರ ಮೂಲಕ ಬಿಡುಗಡೆ ಮಾಡಿ ಆದೇಶಿಸಿದೆ.

ಸದರಿ ಅರ್ಜಿಯ ವಿಷಯವನ್ನು ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ: 06.07.2021ರಂದು ಮರು ವಿಚಾರಣೆಗೆ ಕೈಗೆತ್ತಿಕೊಂಡ ಸಂದರ್ಭದಲ್ಲಿ ಮಾನ್ಯ ನ್ಯಾಯಾಲಯಕ್ಕೆ ಸರ್ಕಾರದ ಪರವಾಗಿ ಅಡ್ವೊಕೇಟ್ ಜನರಲ್ ರವರು ಸಲ್ಲಿಸಿರುವ ಲಿಖಿತ ಹೇಳಿಕೆಯನ್ನು ಪರಿಗಣಿಸಿ, ಮಾನ್ಯ ನ್ಯಾಯಾಲಯವು ನೀಡಿದ ನಿರ್ದೇಶನದಂತೆ ಘಟನೆಯಿಂದಾಗಿ ದಿನಾಂಕ: 02.05.2021 ಮತ್ತು 03.05.2021ರಂದು ಮೃತಪಟ್ಟ ಕೋವಿಡ್-19 ವೈರಾಣು ಸೋಂಕಿತ 24 ವ್ಯಕ್ತಿಗಳ ಪೈಕಿ ಕೆಳಕಂಡ 13 ಮೃತಪಟ್ಟ ವ್ಯಕ್ತಿಗಳ ಕಾನೂನುಬದ್ಧ ವಾರಸುದಾರರಿಗೆ ತಲಾ ರೂ. 3.00 ಲಕ್ಷ (ಮೂರು ಲಕ್ಷ ರೂಪಾಯಿಗಳು ಮಾತ್ರ) ಪರಿಹಾರವನ್ನು ದಿನಾಂಕ: 15.07.2021ರಲ್ಲಿ ಜಿಲ್ಲಾಧಿಕಾರಿ, ಚಾಮರಾಜನಗರ ಜಿಲ್ಲೆ ಇವರ ಮೂಲಕ ಬಿಡುಗಡೆ ಮಾಡಿ ಆದೇಶಿಸಿದೆ.

| | |
|---|---|
| 1. | ಶ್ರೀ ಮೋಹನ್ ರಾಜ್ ಮೇಘವತ್ ಬಿನ್. ರಾಜ್ ನಾಯಕ |
| 2. | ಶ್ರೀಮತಿ ಮಂಜುಳ ಕೋಂ. ಸಿದ್ದನಾಯಕ, ಹೊಸೂರು |
| 3. | ಶ್ರೀ ಮಹದೇವ ಸ್ವಾಮಿ ಮರಿಯಪ್ಪ, ಬಿನ್. ಯರಿಯೂರು. |
| 4. | ಶ್ರೀಮತಿ ನಾಗಮ್ಮ ಕೋಂ. ಶ್ರೀ ವೀರಭದ್ರ ನಾಯಕ್, |
| 5. | ಶ್ರೀ ಮಹದೇವ ಸ್ವಾಮಿ ಬಿನ್. ಗುರುಸಿದ್ದಪ್ಪ |
| 6. | ಶ್ರೀ ದೊಡ್ಡಯ್ಯ ಬಿನ್. ಮರಿಸಿದ್ದಯ್ಯ |
| 7. | ಶ್ರೀ ಅಜಯ್ ಕುಮಾರ್ ಬಿನ್. ನಾಗರಾಜಪ್ಪ |
| 8. | ಶ್ರೀ ಸುರೇಂದ್ರ ಬಿನ್. ಸಿದ್ದಯ್ಯ |
| 9. | ಶ್ರೀಮತಿ ಸರೋಜಮ್ಮ ಕೋಂ. ಮಣಿ |
| 10. | ಶ್ರೀ ಸುಮೇಶ್ ಬಿನ್. ಮರಿಸ್ವಾಮಿ |
| 11. | ಶ್ರೀ ಯೋಗೇಶ್‌ನಯ ಬಿನ್. ಕೃಷ್ಣನಯ |
| 12. | ಶ್ರೀ ಶಿವಸ್ವಾಮಿ ಬಿನ್. ಚನ್ನಯ್ಯ |
| 13. | ಶ್ರೀಮತಿ ಮಹದೇವಮ್ಮ ಕೋಂ. ಸೋಮಣ್ಣ |

**ಸಂಖ್ಯೆ: ಆಕುಕ 140 ಎಂಎಸ್ಎ 2022**

(ಡಾ.ಕೆ. ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ: ಕಂಇ 559 ಟಿಎನ್ಆರ್ 2022

ಕರ್ನಾಟಕ ಸರ್ಕಾರ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ: 16.12.2022

**ಅನಧಿಕೃತ ಟಿಪ್ಪಣಿ**

ವಿಷಯ: ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾದ ಮಾನ್ಯ ಶ್ರೀ ಮರಿತಿಬ್ಬೇಗೌಡ ಇವರು ನಿಯಮ-72 ಮತ್ತು 330 ರಡಿಯಲ್ಲಿ ಸಲ್ಲಿಸಿರುವ ಗಮನ ಸೆಳೆಯುವ ಸೂಚನೆ ಕುರಿತು.

ಉಲ್ಲೇಖ: ಅನಧಿಕೃತ ಟಿಪ್ಪಣಿ ಸಂ. ಆಕುಕ 139 ಎಂಎಸ್ಎ 2022, ದಿನಾಂಕ: 06.12.2022

*****

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿರುವ ಸಾರ್ವಜನಿಕ ಹಿತಾಸಕ್ತಿ ಕುರಿತಾದ ರಿಟ್ ಅರ್ಜಿ ಸಂ. 6435/2020 ಮತ್ತು ಅದಕ್ಕೆ ಹೊಂದಿಕೊಂಡಂತೆ ಇತರೆ ಅರ್ಜಿಗಳ ವಿಷಯವನ್ನು ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ: 20.05.2021ರಂದು ವಿಚಾರಣೆಗೆ ಕೈಗೆತ್ತಿಕೊಂಡು ನೀಡಿದ ನಿರ್ದೇಶನದಂತೆ ಚಾಮರಾಜನಗರ ಜಿಲ್ಲಾ ಆಸ್ಪತ್ರೆಯಲ್ಲಿ ಆಮ್ಲಜನಕದ ಕೊರತೆಯಿಂದ ಸಂಭವಿಸರಬಹುದಾದ ಘಟನೆಯಿಂದಾಗಿ ದಿನಾಂಕ: 02.05.2021 ಮತ್ತು 03.05.2021ರಂದು ಮೃತಪಟ್ಟ ಕೋವಿಡ್-19 ವೈರಾಣು ಸೋಕಿತ 24 ವ್ಯಕ್ತಿಗಳ ಕಾನೂನುಬದ್ಧ ವಾರಸುದಾರರಿಗೆ ತಲಾ ರೂ.2.00 (ಎರಡು ಲಕ್ಷ ರೂಪಾಯಿಗಳು ಮಾತ್ರ)ದಂತೆ ಪರಿಹಾರವನ್ನು ಸರ್ಕಾರದ ಆದೇಶ ಸಂಖ್ಯೆ: ಕಂಇ 232 ಟಿಎನ್ಆರ್ 2021, ದಿನಾಂಕ: 21.05.2021ರಲ್ಲಿ ಜಿಲ್ಲಾಧಿಕಾರಿ, ಚಾಮರಾಜನಗರ ಜಿಲ್ಲೆ ಇವರ ಮೂಲಕ ಬಿಡುಗಡೆ ಮಾಡಿ ಆದೇಶಿಸಿದೆ.

ಸದರಿ ಅರ್ಜಿಯ ವಿಷಯವನ್ನು ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ: 06.07.2021ರಂದು ಮರು ವಿಚಾರಣೆಗೆ ಕೈಗೆತ್ತಿಕೊಂಡ ಸಂದರ್ಭದಲ್ಲಿ ಮಾನ್ಯ ನ್ಯಾಯಾಲಯಕ್ಕೆ ಸರ್ಕಾರದ ಪರವಾಗಿ ಅಡ್ವೋಕೇಟ್ ಜನರಲ್ ರವರು ಸಲ್ಲಿಸಿರುವ ಲಿಖಿತ ಹೇಳಿಕೆಯನ್ನು ಪರಿಗಣಿಸಿ ಮಾನ್ಯ ನ್ಯಾಯಾಲಯವು ನೀಡಿದ ನಿರ್ದೇಶನದಂತೆ ಚಾಮರಾಜನಗರ ಜಿಲ್ಲಾ ಆಸ್ಪತ್ರೆಯಲ್ಲಿ ಆಮ್ಲಜನಕದ ಕೊರತೆಯಿಂದ ಸಂಭವಿಸರಬಹುದಾದ ಘಟನೆಯಿಂದಾಗಿ ದಿನಾಂಕ: 02.05.2021 ಮತ್ತು 03.05.2021ರಂದು ಮೃತಪಟ್ಟ ಕೋವಿಡ್-19 ವೈರಾಣು ಸೋಕಿತ 24 ವ್ಯಕ್ತಿಗಳ ಪೈಕಿ ಕೆಳಕಂಡ 13 ಮೃತ ವ್ಯಕ್ತಿಗಳ ಕಾನೂನುಬದ್ಧ ವಾರಸುದಾರರಿಗೆ ತಲಾ ರೂ.3.00 (ಮೂರು ಲಕ್ಷ ರೂಪಾಯಿಗಳು ಮಾತ್ರ)ದಂತೆ ಪರಿಹಾರವನ್ನು ಸರ್ಕಾರದ ಆದೇಶ ಸಂಖ್ಯೆ: ಕಂಇ 232 ಟಿಎನ್ಆರ್ 2021, ದಿನಾಂಕ: 15.07.2021ರಲ್ಲಿ ಜಿಲ್ಲಾಧಿಕಾರಿ, ಚಾಮರಾಜನಗರ ಜಿಲ್ಲೆ ಇವರ ಮೂಲಕ ಬಿಡುಗಡೆ ಮಾಡಿ ಆದೇಶಿಸಿದೆ.

1. Shri Mohan Raj Meghavath, S/o Raj Naiaka
2. Smt Manjula, W/o Siddanayaka, Hosuru
3. Shri Mahadeva Swamy, S/o Mariyappa, Yariyuru

- 2

4. Smt Nagamma, W/o Shri Veerabhadra Nayak
5. Shri Mahadeva Swamy, S/o Gurusiddappa
6. Doddaiah, S/o Marisaiddaiah
7. Ajaykumar, S/o Nagarajappa
8. Surendra, S/o Siddaiah
9. Sarojamma W/o Mani
10. Sumesh, S/o Mariswamy
11. Yogesh Naya, S/o Krishna Naya
12. Shivaswamy, S/o Channaiah
13. Mahadevamma, W/o Somanna

ಮೇಲ್ಕಂಡ ಮಾಹಿತಿಯೊಂದಿಗೆ ಸರ್ಕಾರದ ಆದೇಶ ಸಂಖ್ಯೆ: ಕಂಇ 232 ಟಿಎನ್ಆರ್ 2021, ದಿನಾಂಕ: 21.05.2021 ಮತ್ತು ದಿನಾಂಕ: 15.07.2021ರ ಆದೇಶದ ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.

G. N. Susheela 16/12/2021

**(ಜಿ.ಎನ್.ಸುಶೀಲ)**
ಸರ್ಕಾರದ ಅಧೀನ ಕಾರ್ಯದರ್ಶಿ
ವಿಪತ್ತು ನಿರ್ವಹಣೆ ಮತ್ತು ಸೇವೆಗಳು-3
ಕಂದಾಯ ಇಲಾಖೆ

**ಇವರಿಗೆ,**

**ಸರ್ಕಾರದ ಅಧೀನ ಕಾರ್ಯದರ್ಶಿ,**
**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ**
**(ಸೇವೆಗಳು-3)**

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಚಾಮರಾಜನಗರ ಜಿಲ್ಲಾ ಆಸ್ಪತ್ರೆಯಲ್ಲಿ ಕೋವಿಡ್-19 ಸೋಂಕಿನಿಂದ ಮೃತಪಟ್ಟ ವ್ಯಕ್ತಿಗಳ ಅವಲಂಬಿತರಿಗೆ ಹೆಚ್ಚುವರಿ ಪರಿಹಾರ ನೀಡುವ ಬಗ್ಗೆ.

**ಓದಲಾಗಿದೆ:**
1. ಸರ್ಕಾರದ ಆದೇಶ ಸಂಖ್ಯೆ: ಕಂಇ 232 ಟಿಎನ್ಆರ್ 2021, ದಿನಾಂಕ:21.05.2021 ಹಾಗೂ ಸಮ ಸಂಖ್ಯೆಯ ತಿದ್ದುಪಡಿ ದಿನಾಂಕ:15.07.2021.
2. ಮಾನ್ಯ ಕರ್ನಾಟಕ ಉಚ್ಚನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ: ಐಪಿಎಲ್/6435/2020 ಮತ್ತು ಇತರೆ ಪ್ರಕರಣಗಳಲ್ಲಿನ ಆದೇಶ ದಿನಾಂಕ:06.07.2021

*****

**ಪ್ರಸ್ತಾವನೆ:**

ಮೇಲೆ ಓದಲಾದ (1) ರ ಸರ್ಕಾರದ ಆದೇಶದಲ್ಲಿ, 2021ರ ಮೇ-2 ಮತ್ತು ಮೇ-3 ರಂದು ಚಾಮರಾಜನಗರ ಜಿಲ್ಲಾ ಆಸ್ಪತ್ರೆಯಲ್ಲಿ ಆಮ್ಲಜನಕ ಕೊರತೆಯಿಂದ ಸಂಭವಿಸಿರಬಹುದಾದ ಘಟನೆಯಿಂದಾಗಿ ಮೃತಪಟ್ಟಂತಹ ಕೋವಿಡ್-19 ವೈರಾಣು ಸೋಂಕಿತ 24 ಜನರ ಕಾನೂನುಬದ್ಧ ವಾರಸುದಾರರಿಗೆ ತಲಾ ರೂ.2.00 ಲಕ್ಷದಂತೆ ಪರಿಹಾರ ಪಾವತಿಸುವ ಸಲುವಾಗಿ ಒಟ್ಟು ರೂ.48.00 ಲಕ್ಷ (ನಲವತ್ತೆಂಟು ಲಕ್ಷ ರೂಪಾಯಿಗಳು ಮಾತ್ರ)ಗಳನ್ನು ಜಿಲ್ಲಾಧಿಕಾರಿಗಳು ಚಾಮರಾಜನಗರ ಜಿಲ್ಲೆ ಇವರಿಗೆ ಬಿಡುಗಡೆ ಮಾಡಲು ಮಂಜೂರಾತಿ ನೀಡಲಾಗಿರುತ್ತದೆ.

ಮೇಲೆ ಓದಲಾದ (2) ರ ಆದೇಶದಲ್ಲಿ, ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿರುವ ಸಾರ್ವಜನಿಕ ಹಿತಾಸಕ್ತಿ ಕುರಿತಾದ ರಿಟ್ ಅರ್ಜಿ ಸಂಖ್ಯೆ:6435/2020 ಮತ್ತು ಅದಕ್ಕೆ ಹೊಂದಿಕೊಂಡಂತೆ ಇತರೆ ಅರ್ಜಿಗಳ ವಿಷಯವನ್ನು ಮಾನ್ಯ ಉಚ್ಚನ್ಯಾಯಾಲಯವು ದಿನಾಂಕ:06.07.2021ರಂದು ಮರು ವಿಚಾರಣೆಗೆ ಕೈಗೆತ್ತಿಕೊಂಡ ಸಂದರ್ಭದಲ್ಲಿ, ಚಾಮರಾಜನಗರ ಜಿಲ್ಲಾ ಆಸ್ಪತ್ರೆಯಲ್ಲಿ ದಿನಾಂಕ:02.05.2021 ಮತ್ತು 03.05.2021 ರಂದು ಕೋವಿಡ್-19 ವೈರಾಣು ಸೋಂಕಿತ 24 ಜನರು ಆಮ್ಲಜನಕದ ಕೊರತೆಯಿಂದ ಮೃತಪಟ್ಟ ಘಟನೆಗೆ ಸಂಬಂಧಿಸಿದಂತೆ ಮಾನ್ಯ ನ್ಯಾಯಾಲಯಕ್ಕೆ ಸರ್ಕಾರದ ಪರವಾಗಿ ಅಡ್ವೊಕೇಟ್ ಜನರಲ್‌ರವರು ಸಲ್ಲಿಸಿರುವ ಹೇಳಿಕೆಯನ್ನು ಪರಿಗಣಿಸಿ ಮಾನ್ಯ ಉಚ್ಚನ್ಯಾಯಾಲಯವು ಈ ಕೆಳಕಂಡಂತೆ ನಿರ್ದೇಶನವನ್ನು ನೀಡಿರುತ್ತದೆ.

### CHAMARAJANAGAR HOSPITAL INCIDENT

**Para-7**

In any case, we are of the view that there is no difference between the cases listed in clauses (1) and (2) of the memo and therefore, when the State Government takes a final decision, it is obvious that the State cannot make a distinction between the cases of the patients enlisted in clauses (1) and (2) and the following deceased persons relatives will have to be provided with ex gratia compensation of Rs.5.00 lakhs. We may clarify here that we are not deciding the issue whether the compensation of Rs.5.00 lakhs is adequate.

**Clasuse-1**

1. Shri Mohan Raj Meghavath, s/o of Raja Naiaka
2. Smt.Manjula, w/o Siddanayaka, Hosuru
3. Shri Mahadeva Swamy, s/o Mariyappa, Yariyuru

**Clause-2**

(1) Smt.Nagamma, w/o Shri Veerabhadra Nayak
(2) Shri Mahadeva Swamy, s/o Gurusiddappa
(3) Doddaiah, s/oi Marisiddaiah
(4) Ajaykumar, s/o Nagarajappa

...2

(5) Surendra, s/o Siddaiah
(6) Sarojamma, w/o Mani
(7) Sumesh, s/o Mariswamy
(8) Yogesh Nayak, s/o Krishna Nayak
(9) Shivaswamy, s/o of Channaiah
(10) Mahadevamma, w/o Somanna

**Para-3**
In clause (3) of the memo, it is stated that as regards the families of the remaining 11 patients out of 24 patients, a compensation of Rs.2.00 lakhs has been already paid and a decision for payment of an additional amount will be taken after the Commission headed by Hon'ble Shri Justice B.A.Patil, a retired Judge of this Court, submits a report.

**Para-8**
As regards 11 patients listed in clause (3) of the memo, we propose to consider their cases after the recommendations of the Commission headed by Hon'ble Shri Justice B.A.Patil, are placed on record

**Para-9**
At this stage, the learned Advocate General states that the decision to pay ex gratia compensation is without prejudice to the rights and contentions of the State Government and the State Government will not treat the same as a precedent. We may also note here that what we have held today is based on the material on record and what is stated in the memo filed by the State Government. The Commissioner appointed under the Commissions of Inquiry Act, 1952 can always independently arrive at his own recommendations/conclusions

ಚಾಮರಾಜನಗರ ಜಿಲ್ಲಾ ಆಸ್ಪತ್ರೆಯಲ್ಲಿ ಆಮ್ಲಜನಕದ ಕೊರತೆಯಿಂದ ಸಂಭವಿಸಿರಬಹುದಾದ ಘಟನೆಯಿಂದ ದಿನಾಂಕ:02.05.2021 ಮತ್ತು 03.05.2021 ರಂದು ಸಾವಿಗೆ ತುತ್ತಾದ ಮೇಲ್ಕಂಡ 13 ವ್ಯಕ್ತಿಗಳ ಕುಟುಂಬಗಳ ಅವಲಂಬಿತ ಸದಸ್ಯರಿಗೆ ಮೇಲೆ ಓದಲಾದ(1) ರ ಆದೇಶದಲ್ಲಿ ಬಿಡುಗಡೆಯಾದ ರೂ.2.00 ಲಕ್ಷಗಳ ಜೊತೆಗೆ, ಮಾನ್ಯ ನ್ಯಾಯಾಲಯದ ಆದೇಶದಂತೆ ಹೆಚ್ಚುವರಿಯಾಗಿ ರೂ.3.00 ಲಕ್ಷಗಳನ್ನು ಪರಿಹಾರವಾಗಿ ಪಾವತಿಸಲು, ಒಟ್ಟು ರೂ.39.00 ಲಕ್ಷಗಳ ಪರಿಹಾರ ಧನವನ್ನು ಮಂಜೂರು ಮಾಡಲು ಸರ್ಕಾರವು ನಿರ್ಧರಿಸಿ, ಇನ್ನುಳಿದ 11 ಮೃತ ವ್ಯಕ್ತಿಗಳ ವಾರಸುದಾರರಿಗೆ ಹೆಚ್ಚಿನ ಪರಿಹಾರ ಪಾವತಿಸುವ ಕುರಿತು ಮಾನ್ಯ ಕರ್ನಾಟಕ ಉಚ್ಚನ್ಯಾಯಾಲಯದ ಮುಂದಿನ ನಿರ್ದೇಶನವನ್ನು ನಿರೀಕ್ಷಿಸಿ ಈ ಕೆಳಕಂಡಂತೆ ಆದೇಶಿಸಿದೆ.

## ಸರ್ಕಾರದ ಆದೇಶ ಸಂಖ್ಯೆ: ಕಂಇ 232 ಟಿಎನ್‌ಆರ್ 2021, ಬೆಂಗಳೂರು, ದಿನಾಂಕ:15-07-2021.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಮಾನ್ಯ ಕರ್ನಾಟಕ ಉಚ್ಚನ್ಯಾಯಾಲಯದ ನಿರ್ದೇಶನದಂತೆ, 2021ರ ಮೇ-2 ಮತ್ತು ಮೇ-3 ರಂದು ಚಾಮರಾಜನಗರ ಜಿಲ್ಲಾ ಆಸ್ಪತ್ರೆಯಲ್ಲಿ ಆಮ್ಲಜನಕ ಕೊರತೆಯಿಂದ ಸಂಭವಿಸಿದ ಘಟನೆಯಿಂದಾಗಿ ಮೃತಪಟ್ಟಂತಹ 24 ವ್ಯಕ್ತಿಗಳ ಪೈಕಿ ಈ ಕೆಳಕಂಡ 13 ಮೃತ ವ್ಯಕ್ತಿಗಳ ಕಾನೂನುಬದ್ಧ ವಾರಸುದಾರರಿಗೆ ತಲಾ **ರೂ.3.00 ಲಕ್ಷ (ಮೂರು ಲಕ್ಷ ರೂಪಾಯಿಗಳು ಮಾತ್ರ)ಗಳನ್ನು** ಪರಿಹಾರ ಪಾವತಿಸುವ ಸಲುವಾಗಿ ಒಟ್ಟು **ರೂ.39.00 ಲಕ್ಷ(ಮೂವತ್ತೊಂಭತ್ತು ಲಕ್ಷ ರೂಪಾಯಿಗಳು ಮಾತ್ರ)ಗಳನ್ನು** ಜಿಲ್ಲಾಧಿಕಾರಿಗಳು ಚಾಮರಾಜನಗರ ಜಿಲ್ಲೆ ಇವರಿಗೆ ಬಿಡುಗಡೆ ಮಾಡಲು ಮಂಜೂರಾತಿ ನೀಡಿದೆ.

(1) Shri Mohan Raj Meghavath, s/o of Raja Naiaka
(2) Smt.Manjula, w/o Siddanayaka, Hosuru
(3) Shri Mahadeva Swamy, s/o Mariyappa, Yariyuru

...3

(4) Smt.Nagamma, w/o Shri Veerabhadra Nayak
(5) Shri Mahadeva Swamy, s/o Gurusiddappa
(6) Doddaiah, s/oi Marisiddaiah
(7) Ajaykumar, s/o Nagarajappa
(8) Surendra, s/o Siddaiah
(9) Sarojamma, w/o Mani
(10) Sumesh, s/o Mariswamy
(11) Yogesh Nayak, s/o Krishna Nayak
(12) Shivaswamy, s/o of Channaiah
(13) Mahadevamma, w/o Somanna

**ಷರತ್ತುಗಳು:**

1. ಮೇಲ್ಕಂಡ ಮೃತ ವ್ಯಕ್ತಿಗಳ ಕಾನೂನುಬದ್ಧ ವಾರಸುದಾರರಿಗೆ ಪರಿಹಾರ ಪಾವತಿಸಲು ಅಗತ್ಯವಾದ ರೂ.39.00 ಲಕ್ಷಗಳನ್ನು ವಿಧಾನಸೌಧದಲ್ಲಿರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಶಾಖೆಯಲ್ಲಿನ ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಿ.ಎಸ್.ಆರ್. ಉಳಿತಾಯ ಖಾತೆ ಸಂಖ್ಯೆ:**38690610155** ರಿಂದ ಚಾಮರಾಜನಗರ ಜಿಲ್ಲೆಯ ಜಿಲ್ಲಾಧಿಕಾರಿಗಳ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಡಿಸ್ಟ್ರಿಕ್ಟ್ ಆಫೀಸ್ ಕಾಂಪ್ಲೆಕ್ಸ್ ಶಾಖೆಯ ಖಾತೆ ಸಂಖ್ಯೆ: **64071962210** (IFSC-SBIN0040700) ಗೆ RTGS/NEFT ಮೂಲಕ ನೇರವಾಗಿ ಜಮಾ ಮಾಡತಕ್ಕದ್ದು.

2. ಜಿಲ್ಲಾಧಿಕಾರಿಗಳಿಗೆ ಬಿಡುಗಡೆಯಾದ ಅನುದಾನದಿಂದ ಮೇಲ್ಕಂಡ 13 ಮೃತ ವ್ಯಕ್ತಿಗಳ ಕಾನೂನುಬದ್ಧ ವಾರಸುದಾರರ ಬ್ಯಾಂಕ್ ಖಾತೆಗೆ ಜಿಲ್ಲಾಧಿಕಾರಿಗಳು, ಚಾಮರಾಜನಗರ ಜಿಲ್ಲೆ ಇವರು ತಲಾ ರೂ.3.00 ಲಕ್ಷಗಳ ಪರಿಹಾರ ಮೊತ್ತವನ್ನು RTGS/NEFT ಮೂಲಕ ನೇರವಾಗಿ ಜಮಾ ಮಾಡತಕ್ಕದ್ದು.

3. ಮೇಲ್ಕಂಡ ವ್ಯಕ್ತಿಗಳ ಅಧಿಕೃತ ವಾರಸುದಾರರಿಗೆ ಪರಿಹಾರ ಮೊತ್ತವನ್ನು ಪಾವತಿಸಿರುವ ವಿವರಗಳ ವರದಿಯನ್ನು ತಪ್ಪದೇ ಮಾನ್ಯ ಕರ್ನಾಟಕ ಉಚ್ಚನ್ಯಾಯಾಲಯಕ್ಕೆ ಮತ್ತು ಅಡ್ವೋಕೇಟ್ ಜನರಲ್ ಕರ್ನಾಟಕ ಇವರಿಗೆ ಜಿಲ್ಲಾಧಿಕಾರಿಗಳು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

ಪರಿಹಾರ ಪಾವತಿಯಲ್ಲಿ ವಿಳಂಬ ಧೋರಣೆ ಅನುಸರಿಸುವುದು ಮತ್ತು ಕಾನೂನು ಬದ್ಧವಾಗಿ ಅಧಿಕೃತವಲ್ಲದ ವಾರಸುದಾರರಿಗೆ ಪರಿಹಾರ ಮೊತ್ತ ವಿತರಿಸುವುದು ಮೊದಲಾದಂತಹ ಲೋಪಗಳು ಕಂಡುಬಂದಲ್ಲಿ ಜಿಲ್ಲಾಧಿಕಾರಿಯವರನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಕೆ.ಸಿ.ಕುಮಾರ್.)**
ಸರ್ಕಾರದ ಉಪ ಕಾರ್ಯದರ್ಶಿ
ಕಂದಾಯ ಇಲಾಖೆ,
(ವಿಪತ್ತು ನಿರ್ವಹಣೆ ಮತ್ತು ನೋಂ & ಮು)

**ಇವರಿಗೆ:**

1. ಪ್ರಧಾನ ಮಹಾಲೇಖಪಾಲರು (A&E), ಕರ್ನಾಟಕ, ಬೆಂಗಳೂರು.
2. ಪ್ರಧಾನ ಮಹಾಲೇಖಪಾಲರು (E&RSA), ಪಿ.ಬಿ.ನಂ.5398, 'ಆಡಿಟ್ ಭವನ', ಕರ್ನಾಟಕ, ಬೆಂಗಳೂರು.

3. ಪ್ರಧಾನ ಮಹಾಲೇಖಪಾಲರು (G&SSA), ಪಿ.ಬಿ.ನಂ.5398, 'ಆಡಿಟ್ ಭವನ', ಕರ್ನಾಟಕ, ಬೆಂಗಳೂರು.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
5. ಪ್ರಾದೇಶಿಕ ಆಯುಕ್ತರು, ಮೈಸೂರು, ವಿಭಾಗ, ಮೈಸೂರು.
6. ಜಿಲ್ಲಾಧಿಕಾರಿಗಳು, ಚಾಮರಾಜನಗರ ಜಿಲ್ಲೆ.
7. ಜಿಲ್ಲಾ ಖಜಾನಾಧಿಕಾರಿಗಳು, ಚಾಮರಾಜನಗರ ಜಿಲ್ಲೆ
8. ಜಿಲ್ಲಾ ವೈದ್ಯಾಧಿಕಾರಿ, ಆರೋಗ್ಯ ಮತ್ತು ಕುಟುಂಬ ಇಲಾಖೆ, ಚಾಮರಾಜನಗರ ಜಿಲ್ಲೆ.
9. ಮಾನ್ಯ ಮುಖ್ಯ ಮಂತ್ರಿಯವರ ಜಂಟಿ ಕಾರ್ಯದರ್ಶಿ, ಪರಿಹಾರ ನಿಧಿ ಶಾಖೆ, ವಿಧಾನ ಸೌಧ, ಬೆಂಗಳೂರು.
10. ವ್ಯವಸ್ಥಾಪಕರು, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ವಿಧಾನಸೌಧ ಶಾಖೆ, ಬೆಂಗಳೂರು.

**ಪ್ರತಿಯನ್ನು:**

1. ಮಾನ್ಯ ಮುಖ್ಯ ಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿಗಳು/ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
2. ಮಾನ್ಯ ಕಂದಾಯ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
4. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ (ವಿ.ನಿ) ಇವರ ಆಪ್ತ ಕಾರ್ಯದರ್ಶಿ, ಬಹುಮಹಡಿ ಕಟ್ಟಡ, ಬೆಂಗಳೂರು.
5. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬೆಂಗಳೂರು.
6. ಸರ್ಕಾರದ ಉಪ ಕಾರ್ಯದರ್ಶಿ, ಕಂದಾಯ ಇಲಾಖೆ (ವಿ.ನಿ) ಇವರ ಆಪ್ತ ಸಹಾಯಕರು.
7. ಲೆಕ್ಕಾಧೀಕ್ಷಕರು, ಕಂದಾಯ ಇಲಾಖೆ (ವಿ.ನಿ) ಲೆಕ್ಕ ಪತ್ರ ಶಾಖೆ.
8. ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿಗಳು.

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಚಾಮರಾಜನಗರ ಜಿಲ್ಲಾ ಆಸ್ಪತ್ರೆಯಲ್ಲಿ ಆಮ್ಲಜನಕದ ಕೊರತೆಯಿಂದ ಸಂಭವಿಸಿರಬಹುದಾದ ಘಟನೆಯಿಂದ ಮೃತಪಟ್ಟ ಕೋವಿಡ್-19 ಸೋಂಕಿತ ವ್ಯಕ್ತಿಗಳ ಅವಲಂಬಿತರಿಗೆ ಪರಿಹಾರ ನೀಡುವ ಬಗ್ಗೆ.

**ಓದಲಾಗಿದೆ:** ಮಾನ್ಯ ಕರ್ನಾಟಕ ಉಚ್ಚನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ: ಐಪಿಎಲ್/6435/2020 ಮತ್ತು ಇತರೆ ಪ್ರಕರಣಗಳಲ್ಲಿನ ಆದೇಶ ದಿನಾಂಕ:20.05.2021.

*****

**ಪ್ರಸ್ತಾವನೆ:**

ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿರುವ ಸಾರ್ವಜನಿಕ ಹಿತಾಸಕ್ತಿ ಕುರಿತಾದ ರಿಟ್ ಅರ್ಜಿ ಸಂಖ್ಯೆ:6435/2020 ಮತ್ತು ಅದಕ್ಕೆ ಹೊಂದಿಕೊಂಡಂತೆ ಇತರೆ ಅರ್ಜಿಗಳ ವಿಷಯವನ್ನು ಮಾನ್ಯ ಉಚ್ಚನ್ಯಾಯಾಲಯವು ದಿನಾಂಕ:20.05.2021ರಂದು ವಿಚಾರಣೆಗೆ ಕೈಗೆತ್ತಿಕೊಂಡ ಸಂದರ್ಭದಲ್ಲಿ ಲಸಿಕಾ ಕಾರ್ಯಕ್ರಮ, ಆಕ್ಸಿಜನ್ ವಿತರಣೆ, ಆಸ್ಪತ್ರೆಗಳಲ್ಲಿ ಹಾಸಿಗೆಗಳ ಲಭ್ಯತೆ, ಚಿತಾಗಾರಗಳು ಮತ್ತು ಚಾಮರಾಜನಗರ ಘಟನೆ ಇನ್ನಿತರ ವಿಷಯಗಳ ವಿಚಾರಣೆಗಳನ್ನು ಪರಾಮರ್ಶಿಸಿರುತ್ತದೆ. ಸದರಿ ಆದೇಶದಲ್ಲಿ ಚಾಮರಾಜನಗರ ಜಿಲ್ಲಾ ಆಸ್ಪತ್ರೆಯಲ್ಲಿ ಆಮ್ಲಜನಕದ ಕೊರತೆಯಿಂದ ಸಂಭವಿಸರಬಹುದಾದ ಘಟನೆಯಿಂದಾಗಿ ದಿನಾಂಕ:02.05.2021 ಮತ್ತು 03.05.2021 ರಂದು ಕೋವಿಡ್-19 ವೈರಾಣು ಸೋಂಕಿತ 24 ವ್ಯಕ್ತಿಗಳ ಸಾವಿನ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾನ್ಯ ಉಚ್ಚನ್ಯಾಯಾಲಯಕ್ಕೆ ಸರ್ಕಾರದ ಪರವಾಗಿ ಅಡ್ವೊಕೇಟ್ ಜನರಲ್‌ರವರು ಸಲ್ಲಿಸಿರುವ ಹೇಳಿಕೆಯನ್ನು ಪರಿಗಣಿಸಿ, ಮಾನ್ಯ ಉಚ್ಚನ್ಯಾಯಾಲಯವು ಈ ಕೆಳಕಂಡಂತೆ ನಿರ್ದೇಶನವನ್ನು ನೀಡಿರುತ್ತದೆ.

**CHAMARAJANAGAR INCIDENT**

**17. At this stage, the learned Advocate General stated that the State Government has decided to pay ex gratia compensation of Rs.2,00,000/- to the families of 24 persons who have died in the Chamarajanagar District Hospital. We hope and trust that the said assurance is acted upon immediately. However, the issue whether there were only 24 deaths due to lack of oxygen and the question of adequacy of compensation will have to be gone into on the next date.**

ಮಾನ್ಯ ನ್ಯಾಯಾಲಯಕ್ಕೆ ನೀಡಿರುವ ವಾಗ್ದಾನದಂತೆ ಚಾಮರಾಜನಗರ ಜಿಲ್ಲಾ ಆಸ್ಪತ್ರೆಯಲ್ಲಿ ಆಮ್ಲಜನಕದ ಕೊರತೆಯಿಂದ ಸಂಭವಿಸಿರಬಹುದಾದ ಘಟನೆಯಿಂದ ದಿನಾಂಕ:02.05.2021 ಮತ್ತು 03.05.2021 ರಂದು ಸಾವಿಗೆ ತುತ್ತಾದ ಕೋವಿಡ್-19 ವೈರಾಣು ಸೋಂಕಿತ 24 ವ್ಯಕ್ತಿಗಳ ಕುಟುಂಬಗಳ ಅವಲಂಬಿತ ಸದಸ್ಯರಿಗೆ ತಲಾ ರೂ.2.00 ಲಕ್ಷಗಳನ್ನು ಪರಿಹಾರವಾಗಿ ಪಾವತಿಸಲು, ಈ ಉದ್ದೇಶಕ್ಕಾಗಿ ಮಾನ್ಯ ಮುಖ್ಯ ಮಂತ್ರಿಯವರ ಪರಿಹಾರ ನಿಧಿಯಿಂದ ಒಟ್ಟು ರೂ.48.00 ಲಕ್ಷಗಳ ಪರಿಹಾರ ಧನವನ್ನು ಮಂಜೂರು ಮಾಡಲು ಸರ್ಕಾರವು ನಿರ್ಧರಿಸಿ, ಈ ಕೆಳಕಂಡಂತೆ ಆದೇಶಿಸಿದೆ.

## ಸರ್ಕಾರದ ಆದೇಶ ಸಂಖ್ಯೆ: ಕಂಇ 232 ಟಿಎನ್‌ಆರ್ 2021, ಬೆಂಗಳೂರು, ದಿನಾಂಕ:21-05-2021.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2021ರ ಮೇ-2 ಮತ್ತು ಮೇ-3 ರಂದು ಚಾಮರಾಜನಗರ ಜಿಲ್ಲಾ ಆಸ್ಪತ್ರೆಯಲ್ಲಿ ಆಮ್ಲಜನಕ ಕೊರತೆಯಿಂದ ಸಂಭವಿಸಿರಬಹುದಾದ ಘಟನೆಯಿಂದಾಗಿ ಮೃತಪಟ್ಟ ಕೋವಿಡ್-19 ವೈರಾಣು ಸೋಂಕಿತ 24 ವ್ಯಕ್ತಿಗಳ ಕಾನೂನುಬದ್ಧ ವಾರಸುದಾರರಿಗೆ ತಲಾ **ರೂ.2.00 ಲಕ್ಷ (ಎರಡು ಲಕ್ಷ ರೂಪಾಯಿಗಳು ಮಾತ್ರ)**ದಂತೆ ಪರಿಹಾರ ಪಾವತಿಸುವ ಸಲುವಾಗಿ ಒಟ್ಟು **ರೂ.48.00 ಲಕ್ಷಗಳನ್ನು (ನಲವತ್ತೆಂಟು ಲಕ್ಷ ರೂಪಾಯಿಗಳು ಮಾತ್ರ)** ಜಿಲ್ಲಾಧಿಕಾರಿಗಳು ಚಾಮರಾಜನಗರ ಜಿಲ್ಲೆ, ಇವರಿಗೆ ಬಿಡುಗಡೆ ಮಾಡಲು ಮಂಜೂರಾತಿ ನೀಡಿ ಆದೇಶಿಸಿದೆ.

...2

**ಷರತ್ತುಗಳು:**

1. ಬಿಡುಗಡೆ ಮಾಡಿರುವ ಅನುದಾನವನ್ನು ವಿಧಾನಸೌಧದಲ್ಲಿರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಶಾಖೆಯ **"ವಿಪತ್ತು ನಿರ್ವಹಣಾ ನಿಧಿ"** ಉಳಿತಾಯ ಖಾತೆಯಲ್ಲಿ ಮಾನ್ಯ ಮುಖ್ಯ ಮಂತ್ರಿಯವರ ಪರಿಹಾರ ನಿಧಿಯಿಂದ ಜಮಾ ಆಗಿರುವ ರೂ.48.00 ಲಕ್ಷ ಮೊತ್ತವನ್ನು ಚಾಮರಾಜನಗರ ಜಿಲ್ಲೆಯ ಜಿಲ್ಲಾಧಿಕಾರಿಗಳ ಬ್ಯಾಂಕ್ ಖಾತೆಗೆ RTGS ಮೂಲಕ ನೇರವಾಗಿ ಜಮಾ ಮಾಡತಕ್ಕದ್ದು.

2. ಜಿಲ್ಲಾಧಿಕಾರಿಗಳು ಚಾಮರಾಜನಗರ ಜಿಲೆ ಇವರು ದಿನಾಂಕ:02-05-2021 ಮತ್ತು 03-05-2021ರಂದು ಚಾಮರಾಜನಗರ ಜಿಲ್ಲಾ ಆಸ್ಪತ್ರೆಯಲ್ಲಿ ಮೃತಪಟ್ಟಂತಹ ಕೋವಿಡ್-19 ವೈರಾಣು ಸೋಂಕಿತ 24 ವ್ಯಕ್ತಿಗಳ ಸಂಪೂರ್ಣ ವಿವರಗಳನ್ನು ಜಿಲ್ಲಾ ವೈದ್ಯಾಧಿಕಾರಿಗಳು, ಚಾಮರಾಜನಗರ ಜಿಲ್ಲೆ ಇವರಿಂದ ಪಡೆಯತಕ್ಕದ್ದು.

3. ಜಿಲ್ಲಾ ವೈದ್ಯಾಧಿಕಾರಿಗಳು ನೀಡಿರುವ ಮೃತ ವ್ಯಕ್ತಿಗಳ ಮಾಹಿತಿಯ ಆಧಾರದ ಮೇಲೆ ಮೃತರ ಕಾನೂನು ಬದ್ಧ ವಾರಸುದಾರರನ್ನು ನಿಯಮಾನುಸಾರ ಗುರುತಿಸಿ, ದೃಢಪಡಿಸಿಕೊಂಡನಂತರವಷ್ಟೇ ಮೃತರ ಕಾನೂನು ಸಮ್ಮತ ವಾರಸುದಾರರಿಂದ ಅಧಿಕೃತ ಗುರುತು ಪತ್ರ ಮತ್ತು ಬ್ಯಾಂಕ್ ವಿವರಗಳನ್ನು ಪಡೆದು, ರೂ.2.00 ಲಕ್ಷಗಳ ಪರಿಹಾರ ಮೊತ್ತವನ್ನು RTGS/NEFT ಮೂಲಕ ನೇರವಾಗಿ ಅವರ ಬ್ಯಾಂಕ್ ಖಾತೆಗೆ ಜಮಾ ಮಾಡತಕ್ಕದ್ದು.

4. ಮೃತಪಟ್ಟ ಎಲ್ಲಾ ವ್ಯಕ್ತಿಗಳ ಅಧಿಕೃತ ವಾರಸುದಾರರಿಗೆ ಪರಿಹಾರ ಮೊತ್ತವನ್ನು ಪಾವತಿಸಿರುವ ಬಗ್ಗೆ ಮಾನ್ಯ ಉಚ್ಚನ್ಯಾಯಾಲಯಕ್ಕೆ ಅನುಸರಣಾ ವರದಿಯನ್ನು ಸಲ್ಲಿಸಲು ಅನುವಾಗುವಂತೆ ಪರಿಹಾರ ಪಾವತಿಯ ವಿವರಗಳ ವರದಿಯನ್ನು ಅಡ್ವೋಕೇಟ್ ಜನರಲ್ ಕರ್ನಾಟಕ ಇವರಿಗೆ ಮತ್ತು ಪ್ರತಿಯನ್ನು ಸರ್ಕಾರಕ್ಕೆ ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

ಪರಿಹಾರ ಪಾವತಿಯಲ್ಲಿ ವಿಳಂಬ ಧೋರಣೆ ಅನುಸರಿಸುವುದು ಮತ್ತು ಕಾನೂನು ಬದ್ಧವಾಗಿ ಅಧಿಕೃತವಲ್ಲದ ವಾರಸುದಾರರಿಗೆ ಪರಿಹಾರ ಮೊತ್ತ ವಿತರಿಸುವುದು ಮೊದಲಾದಂತಹ ಲೋಪಗಳು **ಕಂಡುಬಂದಲ್ಲಿ ಜಿಲ್ಲಾಧಿಕಾರಿಯವರನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದು.**

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಕೆ. ಸುಕುಮಾರ್)
ಸರ್ಕಾರದ ಉಪ ಕಾರ್ಯದರ್ಶಿ
ಕಂದಾಯ ಇಲಾಖೆ,
(ವಿಪತ್ತು ನಿರ್ವಹಣೆ ಮತ್ತು ನೋಂ & ಮು)

**ಇವರಿಗೆ:**

1. ಪ್ರಧಾನ ಮಹಾಲೇಖಪಾಲರು (A&E), ಕರ್ನಾಟಕ, ಬೆಂಗಳೂರು.
2. ಪ್ರಧಾನ ಮಹಾಲೇಖಪಾಲರು (E&RSA), ಪಿ.ಬಿ.ನಂ.5398, 'ಆಡಿಟ್ ಭವನ', ಕರ್ನಾಟಕ, ಬೆಂಗಳೂರು.
3. ಪ್ರಧಾನ ಮಹಾಲೇಖಪಾಲರು (G&SSA), ಪಿ.ಬಿ.ನಂ.5398, 'ಆಡಿಟ್ ಭವನ', ಕರ್ನಾಟಕ, ಬೆಂಗಳೂರು.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
5. ಪ್ರಾದೇಶಿಕ ಆಯುಕ್ತರು, ಮೈಸೂರು, ವಿಭಾಗ, ಮೈಸೂರು.
6. ಜಿಲ್ಲಾಧಿಕಾರಿಗಳು, ಚಾಮರಾಜನಗರ ಜಿಲ್ಲೆ.

...3

7. ಜಿಲ್ಲಾ ಖಜಾನಾಧಿಕಾರಿಗಳು, ಚಾಮರಾಜನಗರ ಜಿಲ್ಲೆ
8. ಜಿಲ್ಲಾ ವೈದ್ಯಾಧಿಕಾರಿ, ಆರೋಗ್ಯ ಮತ್ತು ಕುಟುಂಬ ಇಲಾಖೆ, ಚಾಮರಾಜನಗರ ಜಿಲ್ಲೆ.
9. ಮಾನ್ಯ ಮುಖ್ಯ ಮಂತ್ರಿಯವರ ಜಂಟಿ ಕಾರ್ಯದರ್ಶಿ, ಪರಿಹಾರ ನಿಧಿ ಶಾಖೆ, ವಿಧಾನ ಸೌಧ, ಬೆಂಗಳೂರು.
10. ವ್ಯವಸ್ಥಾಪಕರು, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ವಿಧಾನಸೌಧ ಶಾಖೆ, ಬೆಂಗಳೂರು.

**ಪ್ರತಿಯನ್ನು:**

1. ಮಾನ್ಯ ಮುಖ್ಯ ಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿಗಳು/ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
2. ಮಾನ್ಯ ಕಂದಾಯ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
4. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ (ವಿ.ನಿ) ಇವರ ಆಪ್ತ ಕಾರ್ಯದರ್ಶಿ, ಬಹುಮಹಡಿ ಕಟ್ಟಡ, ಬೆಂಗಳೂರು.
5. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬೆಂಗಳೂರು.
6. ಸರ್ಕಾರದ ಉಪ ಕಾರ್ಯದರ್ಶಿ, ಕಂದಾಯ ಇಲಾಖೆ (ವಿ.ನಿ) ಇವರ ಆಪ್ತ ಸಹಾಯಕರು.
7. ಲೆಕ್ಕಾಧೀಕ್ಷಕರು, ಕಂದಾಯ ಇಲಾಖೆ (ವಿ.ನಿ) ಲೆಕ್ಕ ಪತ್ರ ಶಾಖೆ.
8. ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿಗಳು.

## ಕರ್ನಾಟಕ ವಿಧಾನ ಪರಿಷತ್ತು

### ನಿಯಮ-330

ವಿಷಯ:- ಶ್ರೀ ಮರಿತಿಬ್ಬೇಗೌಡ, ವಿಧಾನ ಪರಿಷತ್ತಿನ ಸದಸ್ಯರು ಇವರು ನಿಯಮ- 330ರಡಿ ಸಲ್ಲಿಸಿರುವ ನಿಯಮದ ಮೇರೆಗೆ ಸೂಚನೆ.

**ಪ್ರಸ್ತಾಪ:-** ಕೋವಿಡ್-19ರ ಅವಧಿಯ ದಿನಾಂಕ: 02-05-2021ರಂದು ಚಾಮರಾಜನಗರ ಜಿಲ್ಲಾ ಆಸ್ಪತ್ರೆಯಲ್ಲಿ ಸಕಾಲದಲ್ಲಿ ರೋಗಿಗಳಿಗೆ ಆಕ್ಸಿಜನ್ ಪೂರೈಸದ ಕಾರಣದಿಂದ ಸುಮಾರು 24 ಮಂದಿ ಮೃತಪಟ್ಟಿದ್ದು, ಈ ಸಂಬಂಧ ರಚಿಸಲಾದ ರಾಜ್ಯ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರಾದ ಶ್ರೀ ಬಿ.ಎ. ಪಾಟೀಲರ ಒನ್ ಮ್ಯಾನ್ ಕಮೀಷನ್ ವರದಿಯಲ್ಲಿ, ವಿಪತ್ತು ನಿರ್ವಹಣಾ ಸಮಿತಿಯ ಮುಖ್ಯಸ್ಥರಾದ ಮೈಸೂರು ಹಾಗೂ ಚಾಮರಾಜನಗರ ಜಿಲ್ಲೆಗಳ ಅಂದಿನ ಇಬ್ಬರು ಜಿಲ್ಲಾಧಿಕಾರಿಗಳನ್ನು ಹಾಗೂ ಚಾಮರಾಜನಗರ ವೈದ್ಯಕೀಯ ವಿಜ್ಞಾನ ಸಂಸ್ಥೆಗಳ ಮುಖ್ಯ ಆಡಳಿತಾಧಿಕಾರಿಯನ್ನು (ಸಿ.ಎ.ಒ) ವರದಿಯಲ್ಲಿ ಕೈಬಿಟ್ಟಿರುವುದರಿಂದ, ವರದಿಯ ನೈಜತೆ ಬಗ್ಗೆ ಸಂಶಯ ಉಂಟಾಗಿರುತ್ತದೆ. ಅಲ್ಲದೆ ಮೃತರ ಅವಲಂಬಿತ ಕುಟುಂಬಸ್ಥರಿಗೆ ಸೂಕ್ತ ಪರಿಹಾರ ನೀಡದೇ ಇರುವುದರಿಂದ, ಉಂಟಾದ ಗಂಭೀರ ಸಮಸ್ಯೆ ಕುರಿತು ಮಾನ್ಯ ವೈದ್ಯಕೀಯ ಶಿಕ್ಷಣ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಲ್ಲಿ ಪ್ರಸ್ತಾಪ ಬಯಸುತ್ತೇನೆ.

****

**ಹೇಳಿಕೆ:-**

ಚಾಮರಾಜನಗರ ಜಿಲ್ಲಾಸ್ಪತ್ರೆ, ಚಾಮರಾಜನಗರ ಇಲ್ಲಿ ದಿನಾಂಕ: 03/05/2021ರಂದು ಕೋವಿಡ್-19 ರೋಗಿಗಳು ಮರಣ ಹೊಂದಿದ ಘಟನೆಗೆ ಸಂಬಂಧಿಸಿದಂತೆ, ಶ್ರೀ ಬಿ.ಎ. ಪಾಟೀಲ್, ನಿವೃತ್ತ ನ್ಯಾಯಾಧೀಶರು, ಕರ್ನಾಟಕ ಉಚ್ಚ ನ್ಯಾಯಾಲಯ ಇವರು ಸಲ್ಲಿಸಿರುವ ತನಿಖಾ ವರದಿಯಲ್ಲಿ, ತನಿಖೆಯಲ್ಲಿ ಸಂಬಂಧಪಟ್ಟ ರೋಗಿಗಳ ಸಂಬಂಧಿಕರು ಮತ್ತು ಘಟನೆ ನಡೆದ ಅವಧಿಯಲ್ಲಿ ಕರ್ತವ್ಯ ನಿರ್ವಹಿಸಿರುವ ಎಲ್ಲಾ ಅಧಿಕಾರಿ/ ಸಿಬ್ಬಂದಿಗಳನ್ನು ಸುದೀರ್ಘವಾಗಿ ವಿಚಾರಣೆಗೆ ಒಳಪಡಿಸಲಾಗಿದೆ. ಪ್ರತಿಯೊಬ್ಬರ ಹೇಳಿಕೆಯನ್ನು ತನಿಖಾಧಿಕಾರಿಗಳು ಪ್ರತ್ಯೇಕವಾಗಿ ವಿಶ್ಲೇಷಿಸಿ, ಹಿಂದಿನ ಜಿಲ್ಲಾಧಿಕಾರಿ, ಮೈಸೂರು, ಹಿಂದಿನ ಜಿಲ್ಲಾಧಿಕಾರಿ, ಚಾಮರಾಜನಗರ ಜಿಲ್ಲೆ ಹಾಗೂ, ಮುಖ್ಯ ಆಡಳಿತಾಧಿಕಾರಿ, ಚಾಮರಾಜನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಇವರುಗಳು ಈ ಘಟನೆಗೆ ಸಂಬಂಧಿಸಿದಂತೆ ಕರ್ತವ್ಯ ನಿರ್ಲಕ್ಷ್ಯತೆ ವಹಿಸಿರುವುದಿಲ್ಲವೆಂಬ ಕುರಿತು ಸಕಾರಣಗಳೊಂದಿಗೆ ವರದಿ ಸಲ್ಲಿಸಿರುತ್ತಾರೆ. ವರದಿಯಲ್ಲಿ, ಕರ್ತವ್ಯ ನಿರ್ಲಕ್ಷ್ಯತೆ ವಹಿಸಿರುತ್ತಾರೆಂದು ಆರೋಪಿಸಿರುವ ಅಧಿಕಾರಿಗಳ ವಿರುದ್ಧ ಶಿಸ್ತುಕ್ರಮಕ್ಕೆ ಪರಿಶೀಲನೆಯಲ್ಲಿರುತ್ತದೆ.

ಚಾಮರಾಜನಗರ ಜಿಲ್ಲಾ ಆಸ್ಪತ್ರೆಯಲ್ಲಿ ಸಂಭವಿಸಿದ ಘಟನೆಯಿಂದಾಗಿ ದಿನಾಂಕ: 02.05.2021 ಮತ್ತು 03.05.2021ರಂರು ಮೃತಪಟ್ಟ ಕೋವಿಡ್-19 ವೈರಾಣು ಸೋಂಕಿತ 24 ವ್ಯಕ್ತಿಗಳ ಕಾನೂನುಬದ್ಧ ವಾರಸುದಾರರಿಗೆ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ರಿಟ್ ಅರ್ಜಿ ಸಂಖ್ಯೆ: 6435/2020 ಮತ್ತು ಅದಕ್ಕೆ ಹೊಂದಿಕೊಂಡಂತೆ ಇತರೆ ಅರ್ಜಿಗಳ ವಿಷಯವನ್ನು ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ: 20.05.2021ರಂದು ವಿಚಾರಣೆಗೆ ಕೈಗೆತ್ತಿಕೊಂಡು ನೀಡಿದ್ದ ನಿರ್ದೇಶನದಂತೆ ತಲಾ ರೂ.2.00 ಲಕ್ಷ (ಎರಡು ಲಕ್ಷ ರೂಪಾಯಿಗಳು ಮಾತ್ರ) ದಿನಾಂಕ: 21.05.2021ರಲ್ಲಿ ಜಿಲ್ಲಾಧಿಕಾರಿ, ಚಾಮರಾಜನಗರ ಜಿಲ್ಲೆ ಇವರ ಮೂಲಕ ಬಿಡುಗಡೆ ಮಾಡಿ ಆದೇಶಿಸಿದೆ.

148-6
8370-11

ಸದರಿ ಅರ್ಜಿಯ ವಿಷಯವನ್ನು ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ: 06.07.2021ರಂದು ಮರು ವಿಚಾರಣೆಗೆ ಕೈಗೆತ್ತಿಕೊಂಡ ಸಂದರ್ಭದಲ್ಲಿ ಮಾನ್ಯ ನ್ಯಾಯಾಲಯಕ್ಕೆ ಸರ್ಕಾರದ ಪರವಾಗಿ ಅಡ್ವೊಕೇಟ್ ಜನರಲ್ ರವರು ಸಲ್ಲಿಸಿರುವ ಲಿಖಿತ ಹೇಳಿಕೆಯನ್ನು ಪರಿಗಣಿಸಿ, ಮಾನ್ಯ ನ್ಯಾಯಾಲಯವು ನೀಡಿದ ನಿರ್ದೇಶನದಂತೆ ಘಟನೆಯಿಂದಾಗಿ ದಿನಾಂಕ: 02.05.2021 ಮತ್ತು 03.05.2021ರಂದು ಮೃತಪಟ್ಟ ಕೋವಿಡ್-19 ವೈರಾಣು ಸೋಂಕಿತ 24 ವ್ಯಕ್ತಿಗಳ ಪೈಕಿ ಕೆಳಕಂಡ 13 ಮೃತಪಟ್ಟ ವ್ಯಕ್ತಿಗಳ ಕಾನೂನುಬದ್ಧ ವಾರಸುದಾರರಿಗೆ ತಲಾ ರೂ. 3.00 ಲಕ್ಷ (ಮೂರು ಲಕ್ಷ ರೂಪಾಯಿಗಳು ಮಾತ್ರ) ಪರಿಹಾರವನ್ನು ದಿನಾಂಕ: 15.07.2021ರಲ್ಲಿ ಜಿಲ್ಲಾಧಿಕಾರಿ, ಚಾಮರಾಜನಗರ ಜಿಲ್ಲೆ ಇವರ ಮೂಲಕ ಬಿಡುಗಡೆ ಮಾಡಿ ಆದೇಶಿಸಿದೆ.

| | |
|---|---|
| 1. | ಶ್ರೀ ಮೋಹನ್ ರಾಜ್ ಮೇಘವತ್ ಬಿನ್. ರಾಜ್ ನಾಯಕ |
| 2. | ಶ್ರೀಮತಿ ಮಂಜುಳ ಕೋಂ. ಸಿದ್ದನಾಯಕ, ಹೊಸೂರು |
| 3. | ಶ್ರೀ ಮಹದೇವ ಸ್ವಾಮಿ ಮರಿಯಪ್ಪ, ಬಿನ್. ಯರಿಯೂರು. |
| 4. | ಶ್ರೀಮತಿ ನಾಗಮ್ಮ ಕೋಂ. ಶ್ರೀ ವೀರಭದ್ರ ನಾಯಕ್, |
| 5. | ಶ್ರೀ ಮಹದೇವ ಸ್ವಾಮಿ ಬಿನ್. ಗುರುಸಿದ್ದಪ್ಪ |
| 6. | ಶ್ರೀ ದೊಡ್ಡಯ್ಯ ಬಿನ್. ಮರಿಸಿದ್ದಯ್ಯ |
| 7. | ಶ್ರೀ ಅಜಯ್ ಕುಮಾರ್ ಬಿನ್. ನಾಗರಾಜಪ್ಪ |
| 8. | ಶ್ರೀ ಸುರೇಂದ್ರ ಬಿನ್. ಸಿದ್ದಯ್ಯ |
| 9. | ಶ್ರೀಮತಿ ಸರೋಜಮ್ಮ ಕೋಂ. ಮಣಿ |
| 10. | ಶ್ರೀ ಸುಮೇಶ್ ಬಿನ್. ಮರಿಸ್ವಾಮಿ |
| 11. | ಶ್ರೀ ಯೋಗೇಶ್‌ನಯ ಬಿನ್. ಕೃಷ್ಣನಯ |
| 12. | ಶ್ರೀ ಶಿವಸ್ವಾಮಿ ಬಿನ್. ಚನ್ನಯ್ಯ |
| 13. | ಶ್ರೀಮತಿ ಮಹದೇವಮ್ಮ ಕೋಂ. ಸೋಮಣ್ಣ |

**ಸಂಖ್ಯೆ: ಆಕುಕ 139 ಎಂಎಸ್ ಎಂ 2022**

(ಡಾ.ಕೆ. ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು